# ಪಿಳ್ಳಂಗೋವಿಯ ಚೆಲ್ವ ಕೃಷ್ಣನ

**Ref.**: Dasara Maatina Sobagu, by Dr. Vijayendra R Desai, page No. 142.

ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ
ಎಲ್ಲಿ ನೋಡಿದರಲ್ಲಿ ತಾನಿಲ್ಲದಿಲ್ಲವೆಂದು ಬಲ್ಲ ಜಾಣರು || ಪ ||

ನಂದಗೋಪನ ಮಂದಿರಂಗಳ ಸಂದುಗೊಂದಿನಲಿ
ಚೆಂದ ಚೆಂದದ ಗೋಪ ಬಾಲರ ವೃಂದ ವೃಂದದಲಿ
ಸುಂದರಾಂಗದ ಸುಂದರಿಯರ ಹಿಂದು ಮುಂದಿನಲಿ
ಅಂದದಾಕಳ ಕಂದ ಕರುಗಳ ಮಂದೆ ಮಂದೆಯಲಿ || ೧ ||

ಶ್ರೀ ಗುರೂಕ್ತ ಸದಾ ಸುಮಂಗಳ ಯೋಗ ಯೋಗದಲಿ
ಆಗಮಾರ್ಥದೊಳಗೆ ಮಾಡುವ ಯಾಗ ಯಾಗದಲಿ
ಶ್ರೀಗೆ ಭಾಗ್ಯನಾಗಿ ವರ್ತಿಪ ಭೋಗ ಭೋಗದಲಿ
ಭಾಗವತರು ಸದಾ ಬಾಗಿ ಪಾಡುವ ರಾಗ ರಾಗದಲಿ || ೨ ||

ಈ ಚರಾಚರದೊಳಗೆ ಜನಂಗಳಾಚೆ ಈಚೆಯಲಿ
ಖೇಚರೇಂದ್ರ ಸುತನ ರಥದ ಚೌಕ ಪೀಠದಲಿ
ನಾಚದೇ ಮಾಧವ ಎಂಬ ಭಕ್ತರ ವಾಚ ಕಂಗಳಲಿ
ವೀಚುಕೊಂಡದ ಪುರಂದರ ವಿಠಲನ ಲೋಚನಾಗ್ರದಲಿ || ೩ ||

ಪುರಂದರ ದಾಸರ ಪ್ರಸಿದ್ಧ ಹಾಡು. ಬಾಲಕೃಷ್ಣ ತುಂಟ ಮತ್ತೆ ಚಂಚಲ. ಒಂದೆಡೆ ನಿಲ್ಲುವವನಲ್ಲ. ಆತ ಕಾಣಲಿಲ್ಲ. ಇದೀಗ ಇಲ್ಲೇ ಇದ್ದ. ಎಲ್ಲಿ ಹೋದ? ಹುಡಕ ತೊಡಗಿದರು. 'ಈಗ ಕೃಷ್ಣನನ್ನು ಕಂಡೆವು' ಕೆಲವರು ಹೇಳಿದರು.

ಈ ಪದಕ್ಕೆ ಆಳ ಅರ್ಥ ನೋಡೋಣ. ಮೇಲ್ನೋಟ ಬಿಡೋಣ.

ಕೃಷ್ಣನನ್ನು ಹುಡುಕ ತೊಡಗಿದವರು ಯಾರು? ಭಾಗವತರು ತಾನೇ? ಭಗವಂತನನ್ನು ಹುಡುಕುವರು ಭಾಗವತರು!

ಕೃಷ್ಣನನ್ನು ಕಂಡವರು ಯಾರು? ದೇವರನ್ನು ಕಂಡವರು ಅಪರೋಕ್ಷ ಜ್ಞಾನಿಗಳು.

ದೇವರನ್ನು ಹುಡುಕವವರು, ದೇವರನ್ನು ಕಂಡವರಿಗೆ ಕೇಳುತ್ತಾರೆ - ನಮ್ಮ ಕೃಷ್ಣನನ್ನು ಎಲ್ಲಿ ಕಂಡಿರಿ? ಎಲ್ಲಿ ನೋಡಿದಿರಿ? ತುಂಬಿದ ಆತುರ.

'ಎಂಥಾ ಕೃಷ್ಣ?'- ಪ್ರಶ್ನೆ.

ಭಾಗವತರು ಬಣ್ಣಿಸುತ್ತಾರೆ - **ನಮ್ಮವ 'ಪಿಳ್ಳಂಗೋವಿಯ ಚೆಲ್ವ ಕೃಷ್ಣ'**

ಕೊಳಲೂದುವ ಕೃಷ್ಣ. ಮನ್ಮಥನ ಪಿತನಲ್ಲವೇ. ಮನಮೋಹಕ ಚೆಲುವಿನ ಕೃಷ್ಣ.

ಕೊಳಲು ಜಡ. ಕೃಷ್ಣನ ಅಧರ ಸ್ಪರ್ಶದ ಅರ್ಹತೆ ಅದಕಿಲ್ಲ. ಲಕ್ಷ್ಮೀ ದೇವಿಯೇ ಅದರಲ್ಲಿ ಸೇರುತ್ತಾಳೆ. ಕೊಳಲಾಗುತ್ತಾಳೆ. ಕೃಷ್ಣ ತುಟಿಯ ಲ್ಲಿಟ್ಟುಕೊಳ್ಳುತ್ತಾನೆ. ಸುಶ್ರಾವ್ಯ ನಾದ ಹೊರಡುತ್ತದೆ.

'ಏನು ಸವಿಯೋ ನಿನ್ನ ಕೊಳಲ ದನಿಯು!'

ಚರಾಚರ ಜಗತ್ತು ಕೊಳಲ ನಾದಕ್ಕೆ ಮೋಹಿತ, ಮತ್ತೆ ಸ್ತಬ್ಧ! ನಾದ ಎಂದರೆ ವೇದ. ಸರ್ವವೇದ ಪ್ರತಿಪಾದ್ಯನಲ್ಲವೇ ಕೃಷ್ಣ! ವೇದಕ್ಕೆ ಅಭಿಮಾನಿನಿ ಲಕ್ಷ್ಮೀ ದೇವಿ ತಾನೇ?

ಲಕ್ಷ್ಮೀಯೇ ರುಕ್ಮಿಣಿ. ಕೃಷ್ಣನ ನಿಜ ರಮಣಿ. ತಾನೇ ಕೊಳಲಾದಳು. ಶ್ರುತಿಯಾದಳು. ಒಡೆಯನ ತುಟಿ ಸೇರಿದಳು. ಮಧುರ ಕೊಳಲ ದನಿಯಾದಳು. ಸುಶ್ರಾವ್ಯ ವೇದದ ನಾದವಾದಳು. ಅವಳೇ ಮಾಯಾ ದೇವಿ. ಜಗತ್ತು ಮೋಹಿತ. ಸ್ತಬ್ಧ. ಕೃಷ್ಣನಿಂದ ಕೊಳಲಿಗೆ ಮೆರಗು. ಕೊಳಲು ಕೃಷ್ಣನಿಗೆ ಅಲಂಕಾರ. ಕೃಷ್ಣ ರುಕ್ಮಿಣಿಗೆ ಭೂಷಣವಲ್ಲವೇ! ಪಿಳ್ಳಂಗೋವಿಯ ಕೃಷ್ಣ ಎಂದರೆ ರುಕ್ಮಿಣಿ ಕೃಷ್ಣ ಎಂದಾಯಿತು.

“ರಂಗ ಕೊಳಲನೂದಲಾಗ ಮಂಗಳಮಯವಾಯ್ತು ಧರೆ ................ ”

ಮತ್ತೆ ಚೆಲ್ವ ಕೃಷ್ಣ.

ಕೃಷ್ಣ ಚೆಲುವ ಎಂದಲ್ಲ, ಎಲ್ಲ ಚೆಲುವು ಕೃಷ್ಣನದೇ. ಚೆಲುವಿನ ಖಣಿ ಆತ. ಸೌಂದರ್ಯ ಹುಟ್ಟಿದ್ದೇ ಅವನಲ್ಲಿ! ಇದು ಪಿಳ್ಳಂಗೋವಿಯ ಮಹಾತ್ಮೆ.

ಇಂಥ ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಕಂಡೀರಾ?

ಕಂಡವರಿಗೆ ಹುಡುಕುವವರ ಪ್ರಶ್ನೆ.

ಹುಡುಕುವ ಭಾಗವತರೂ ಬಹು ಜಾಣರು. 'ಕಂಡವರು ಜ್ಞಾನಿಗಳು, ಸರ್ವತ್ರ ವ್ಯಾಪ್ತ ಪರಮಾತ್ಮ, ಇದನ್ನು ಬಲ್ಲ ಜಾಣರವರು. ಎಲ್ಲೆಲ್ಲೂ, ಎಳ್ಳು ಮೊನೆಯ ಮುಳ್ಳುಕೊನೆಯ

ಪೊಳ್ಳು ಬಿಡದೇ ಎಲ್ಲ ಠಾವಿನಲ್ಲಿ, ಎಲ್ಲಿ ನೋಡಿದರಲ್ಲಿ ರುಕ್ಮಿಣಿ ನಲ್ಲನನ್ನು ಕಾಣಬಲ್ಲ

ಅಪರೋಕ್ಷೀಕೃತ ಶ್ರೀಶರವರು.

**ಎಲ್ಲಿ ನೋಡಿದಿರಿ,** ಎಂದರೆ - ಕೃಷ್ಣ ಕಾಣದೇ ಇದ್ದ ಸ್ಥಳವಿಲ್ಲವೈ ಈ ಜಗದೋಳ್.  ಎಲ್ಲಿ ನೋಡಿದರಲ್ಲಿ ಕೃಷ್ಣನ ಕಂಡೆವು'.  ಇದು ಕೃಷ್ಣನ ಕಂಡವರ ಲಕ್ಷಣ ಶಾಸ್ತ್ರ ಎಂದು ಹುಡುಕುವವರಿಗೂ ಗೊತ್ತು.

**ನಂದಗೋಪನ ಮಂದಿರಂಗಳ ಸಂದುಗೊಂದಿನಲಿ**

**ಚೆಂದ ಚೆಂದದ ಗೋಪ ಬಾಲರ ವೃಂದ ವೃಂದದಲಿ**

**ಸುಂದರಾಂಗದ ಸುಂದರಿಯರ ಹಿಂದು ಮುಂದಿನಲಿ**

**ಅಂದದಾಕಳ ಕಂದ ಕರುಗಳ ಮಂದೆ ಮಂದೆಯಲಿ    || ೧ ||**

'ನಂದಗೋಪನ ಮಂದಿರಂಗಳ ಸಂದುಗೊಂದಿನಲಿ'

ನಂದಗೋಪನಲಿ ಕೃಷ್ಣನ ಕಂಡೆವು.

ನಂದ - ಜಗತ್ತಿಗೇ ನಂದದಾಯಕ ಕಂದ ಕೃಷ್ಣನ ಕಂಡೆವು.

ಗೋಪ - ಗೋ = ಆಕಳು.  ಆಕಳಲ್ಲಿ ಕಂಡೆವು.  ಆಕಳುಗಳ ಮಂದೆಯಲ್ಲಿ ಕಂಡೆವು.  ಆಕಳು ಪಾಲಿಪ ಗೊಪಾಲನ ಕಂಡೆವು.

ಹಿಂಡು ಹಿಂಡು ಗೋವುಗಳು.  ಹಿಂಡಿಗೊಬ್ಬ ಕಾವ ಬಾಲಕ.  ಪ್ರತಿ ಗೋವಿನಲ್ಲಿ ಕೃಷ್ಣ.  ಗೋವತ್ಸಗಳಲಿ ಕೃಷ್ಣ, ಗೋಗಳ ಹಿಂಡಿನಲ್ಲಿ ಕೃಷ್ಣ.  ಗೋಪಾಲಕರಲ್ಲಿ ಪಿಳ್ಳಂಗೋವಿಯ ಕೃಷ್ಣ.

ಗೋ = ವೇದ.  ಪ =ಪಾದ್ಯ

ಸಕಲ ವೇದಗಳಲಿ ಕೃಷ್ಣನ ಕಂಡೆವು.

ಸಕಲವೇದ ಪ್ರತಿಪಾದ್ಯ ಕೃಷ್ಣನ ಕಂಡೆವು.  ಸಕಲ ವೇದ ಪಾಲಿಪನ ಕಂಡೆವು.

ಮಂದಿರಂಗಳಲಿ - ಗೋಕುಲದ ನದೀ ತಟದಲ್ಲಿ, ತೋಟದಲ್ಲಿ, ಆಟದಲ್ಲಿ, ಓಟದಲ್ಲಿ ಪ್ರತಿ ಮನೆ ಮನೆಯಲ್ಲೂ, ಮನೆಯ ತುಂಬೆಲ್ಲಾ ಯಶೋಧಾನಂದನನ ಕಂಡೆವು. ಅಷ್ಟೇ ಏಕೆ, ಅಲ್ಲಿ ಕಂಡ ಕಂಡವರ ಹೃದಯದಲ್ಲೂ ತುಂಟ ಕೃಷ್ಣನೇ !

ಸುಂದರಾಂಗದ ಸುಂದರಿಯರಾದ ಗೋಪಿಯರ ಹಿಂದೆ ಕೃಷ್ಣ. ಮುಂದೆ ಕೃಷ್ಣ. ಗೋಪಿಯರ ಕಂಗಳಲಿ ಕೃಷ್ಣ. ಹೃದಯಗಳಲ್ಲಿ ಸದಾ ಕೃಷ್ಣ!

ಯಾಕೆ? ಲಕ್ಷ್ಮಿಯ ವಿಶೇಷ ಸನ್ನಿಧಾನ ಅವರಲಿ.

ಹೀಗೆ ಜ್ಞಾನಿಗಳು, ಕಾಣುವ ಕಾಣದ ಕೃಷ್ಣನನ್ನು, ಜ್ಞಾನದ ಹೊಸಕಣ್ಣು ಹಚ್ಚಿಕೊಂಡು ಎಲ್ಲೆಲ್ಲೂ ಕಂಡರು !

**ಶ್ರೀ ಗುರೂಕ್ತ ಸದಾ ಸುಮಂಗಳ ಯೋಗ ಯೋಗದಲಿ**

**ಆಗಮಾರ್ಥದೊಳಗೆ ಮಾಡುವ ಯಾಗ ಯಾಗದಲಿ**

**ಶ್ರೀಗೆ ಭಾಗ್ಯನಾಗಿ ವರ್ತಿಪ ಭೋಗ ಭೋಗದಲಿ**

**ಭಾಗವತರು ಸದಾ ಬಾಗಿ ಪಾಡುವ ರಾಗ ರಾಗದಲಿ || ೨ ||**

ಮತ್ತೆಲ್ಲಿ ಕಂಡರು? -

ಸಕಲ ಗೃಹಬಲಗಳಲ್ಲಿ ಆತ. ಕಾಲದಲ್ಲಿ ಆತ. ಕಾಲಾಂತರ್ಯಾಮಿ ಆತ. ಯಜನ, ಯಾಗವೂ ಅವನೇ. ಯೋಗ ಸುಯೋಗ ಅವನೇ. ಭೋಗ್ಯ ಭೋಗಗಳೂ ರುಕ್ಮಿಣೀಕೃಷ್ಣ ಮಯ.

ಆಗಮಗಳಲ್ಲಿ ಕೃಷ್ಣ. ಆಗಮಾರ್ಥಗಳಲ್ಲಿ ಕೃಷ್ಣ. ಗೀತೆಯಲ್ಲಿ ತಾನೇ ಹೇಳಿದನಲ್ಲ ಕೃಷ್ಣ -'-- ಅಹಮೇವ ವೇದ್ಯಃ'

ವೇದ ವೇದ್ಯ ಕೃಷ್ಣ. ವೇದ ಪ್ರತಿಪಾದ್ಯ ಕೃಷ್ಣ.

ಶ್ರೀರಮಣಿಯ ಸೌಭಾಗ್ಯ ಶ್ರೀಕೃಷ್ಣ. ಅಸನ, ವಸನ, ಆಹಾರ, ವಿಹಾರ, ನೋಟ, ಮಾಟ, ಇಂಪು, ಕಂಪು, ತಂಪು, ಬಿಸಿ, ಶ್ರಾವ್ಯ ಸುಶ್ರಾವ್ಯ ಸಕಲ ಭೋಗಗಳಲ್ಲಿ ಭೋಗ ರೂಪನಾಗಿ ತಾನಿದ್ದಾನೆ. ಮತ್ತೆ ಭೋಕ್ತ, ಭೋಗ್ಯನಾಗಿದ್ದಾನೆ

ಮತ್ತೆ ಅವನ ಕಂಡವರು ಹುಡುಕುವವರಿಗೆ ಹೇಳುತ್ತಾರೆ - ನೀವು ಕೃಷ್ಣನನ್ನು ಹಾಡಿ ಸ್ತುತಿಸುತ್ತಿದ್ದಿರಲ್ಲಾ, ಆ ಗೀತದಲ್ಲಿ, ಸಂಗೀತದಲ್ಲಿ ರಾಗ ರಾಗಗಳಲ್ಲಿಯೂ ಕೃಷ್ಣನನ್ನು ಕಂಡೆವು. ಹೀಗೆ ಕೃಷ್ಣ ಗೀತದಲ್ಲಿದ್ದಾನೆ. ಗಾಯನದಲ್ಲಿದ್ದಾನೆ. ಗಾಯಕರಲ್ಲಿದ್ದಾನೆ. ಶ್ರಾವಕರಲ್ಲೂ ಅವನೇ.

**ಈ ಚರಾಚರದೊಳಗೆ ಜನಂಗಳಾಚೆ ಈಚೆಯಲಿ**

**ಖೇಚರೇಂದ್ರ ಸುತನ ರಥದ ಚೌಕ ಪೀಠದಲಿ**

**ನಾಚದೇ ಮಾಧವ ಎಂಬ ಭಕ್ತರ ವಾಚ ಕಂಗಳಲಿ**

**ವೀಚು ಕೊಂಡದ ಪುರಂದರ ವಿಠಲನ ಲೋಚನಾಗ್ರದಲಿ || ೩ ||**

ಶ್ರೀಕೃಷ್ಣ ಪರಮ ಕರುಣಾಳು. ಭಕ್ತವತ್ಸಲ. ಹೂವು ತರುವವರ ಮನೆಗೆ ಹುಲ್ಲು ತರುವವ. ಈತಗೆ ಗರುವ ಒಂದಿಷ್ಟೂ ಇಲ್ಲ. ಭಕ್ತರಿಗಾಗಿ ಏನು ಬೇಕಾದರೂ ಮಾಡಬಲ್ಲ. ಭಕ್ತ, ಸಖ ಪಾರ್ಥ. ಆತನಿಗಾಗಿ ಆತನ ರಥದ ಸಾರಥಿಯಾದ. ಬಂಡಿಯ ಬೋವಿಗನಾಗಲು ಹಿಂಜರಿಯಲಿಲ್ಲ. ಪಾರ್ಥನ ಕಾಯ್ದ. ಪಾರ್ಥಸಾರಥಿ ಎಂದು ಹೆಸುರುವಾಸಿಯಾದ. ಪಾಮರ ಭಕ್ತ ಮಾಧವ ತನ್ನ ಸ್ಮರಿಸಿದ. ಪರಮಪುರುಷ ಮಾಧವ, ಭಕ್ತ ಮಾಧವನ ಉದ್ಧರಿಸಲು ಹಿಂಜರಿಯಲಿಲ್ಲ. ಇಂಥ ಭಕ್ತ ವಾತ್ಸಲ್ಯ ಪರಮಾತ್ಮನದು. ಹೀಗೆ ಶ್ರೀಕೃಷ್ಣ ಪರಮಾತ್ಮ ಸರ್ವತ್ರ ವ್ಯಾಪ್ತ. ಸರ್ವಗತ. ಸರ್ವರ ಅಂತರ್ಯಾಮಿ. ವರ್ಣಗಳಲ್ಲಿ ಆತ. ಶಬ್ದಗಳಲ್ಲಿ ಆತ. ಶಬ್ದರಾಶಿ ವೇದಗಳಲ್ಲಿ ಆತ. ಜೀವಿಗಳಲ್ಲಿ ಆತ. ವಸ್ತುಗಳಲ್ಲಿ ಆತ. ಪದಾರ್ಥಗಳಲ್ಲಿ ಆತ. ಸಕಲ ಚರಾಚರಗಳಲ್ಲಿ, ಬ್ರಹ್ಮಾಂಡದ ತುಂಬೆಲ್ಲ ಆತತನಾಗಿ ತುಂಬಿಕೊಂಡಿದ್ದಾನೆ ಶ್ರೀಕೃಷ್ಣ. ಸರ್ವತ್ರ ವ್ಯಾಪ್ತ. ಪರಮಾತ್ಮನ ವ್ಯಾಪ್ತತ್ವದ ಮಹಿಮೆ ಅಂತು ಮುಂದುವರಿಯುತ್ತದೆ.

ಬ್ರಹ್ಮಾಂಡದಲ್ಲಿ ಕಂಡೆವು. ಬ್ರಹ್ಮಾಂಡದ ತುಂಬ ತುಂಬಿದ ಚರಾಚರ ವಸ್ತುಗಳ ತುಂಬೆಲ್ಲ ಆತ ವ್ಯಾಪ್ತ. ಅಷ್ಟೇ ಅಲ್ಲ, ಬ್ರಹ್ಮಾಂಡದ ಆಚೆಯೂ ಆತ ಅನಂತವಾಗಿ ವ್ಯಾಪ್ತ. ಇಂತು ನಮ್ಮ ಪಿಳ್ಳಂಗೋವಿಯ ಕೃಷ್ಣ ಎಲ್ಲಿ ನೋಡಿದರಲ್ಲಿ ಇರುತಿಹನು, ಕಾಣುತಿಹನು, ಕೊನೆಗೆ ಪುರುಂದರ ವಿಠಲನ ಕಂಗಳಲಿ ಕೃಷ್ಣನನ್ನು ಕಾಂಬರು ದಾಸ ವರೇಣ್ಯರು. ಏನು ಧನ್ಯರೋ ಕೃಷ್ಣನ ಕಂಡವರು !

ಡಾ. ವಿಜಯೇಂದ್ರ ದೇಸಾಯಿ

ಶ್ರೀ ಕೃಷ್ಣಾರ್ಪಣಮಸ್ತು